ಕಣ್ಣಿನ ಹುಡುಗಿ' ಕಥೆಯಲ್ಲಿ ಮೂರು ಮುಕ್ತಾಯಗಳಿವೆ. ವಸ್ತುವಿನ ಸಾಧ್ಯತೆಗಳನ್ನು ಓದುಗರ ಮುಂದಿಡುವುದು ಇದರ ಉದ್ದೇಶ. ಕಥೆಯನ್ನು ಓದಿ ಮುಗಿಸಿದ ಮೇಲೆ ಓದುಗರ ಮನದಲ್ಲೂ ಅನೇಕ ಸಾಧ್ಯತೆಗಳು ಮೂಡಬಹುದಲ್ಲ? ನಿಜವಾದ ಒಳ್ಳೆಯ ಕಥೆ ಓದುಗರ ಮನದಲ್ಲಿ ಮುಂದುವರಿಯುತ್ತದೆ ಎನ್ನುತ್ತಾರೆ. ಈ ಹಿಂದೆ 'ಮಯೂರ' ಪ್ರಕಟಿಸುತ್ತಿದ್ದ ಅಪೂರ್ಣ ಕಥೆಗಳು ಹೀಗೆ ಓದುಗರಲ್ಲಿ ಅಡಗಿರುವ ಕಥೆಗಾರನನ್ನು ಬಡಿದೆಬ್ಬಿಸಲು ಪ್ರಯತ್ನಿಸಿದವು. ಆ ಅಂಕಣದಲ್ಲಿ ನಾನೂ ಒಂದು ಅಪೂರ್ಣ ಕಥೆ ಬರೆದಿದ್ದೆ ಎಂದು ನೆನಪು.

ಅನೇಕ ಅನುಭವಗಳು ಆ ಕ್ಷಣದಲ್ಲೇ ಕಥೆಯೊಂದನ್ನು ಹೊಳೆಯಿಸುತ್ತವೆ ಇನ್ನು ಕೆಲವು ಎಷ್ಟೋ ವರ್ಷಗಳ ಅನಂತರ ಕಥೆಯಾಗಿ ಕಾಣಿಸಿಕೊಳ್ಳುತ್ತವೆ. ಒಮ್ಮೆ ಕೆಂಪೇಗೌಡ ರಸ್ತೆಯಲ್ಲಿ ಬಸ್ಸಿನಲ್ಲಿ ಹೋಗುತ್ತಿದ್ದಾಗ ಸಿದ್ಧ ಉಡುಪಿನ ಒಂದು ಅಂಗಡಿಯ ಮುಂದೆ ಗೊರಿಲ್ಲಾ ಮತ್ತು ಮೊಲದ ವೇಷ ಧರಿಸಿದವರು ಗ್ರಾಹಕರನ್ನು ಕರೆಯುತ್ತಿರುವುದನ್ನು ನೋಡಿದೆ. ಮುಂದಿನ ಕೆಲವೇ ಕ್ಷಣಗಳಲ್ಲಿ ಇಡೀ ಕಥೆ ಫಳಕ್ಕನೆ ಹೊಳೆದುಬಿಟ್ಟಿತು. ಅವರನ್ನು ಬೇರೆಡೆ ಕೆಲಸ ಮಾಡುತ್ತಿದ್ದೇವೆಂದು ಸುಳ್ಳು ಹೇಳುವ ಪ್ರೇಮಿಗಳನ್ನಾಗಿ ಮಾಡಿ ವೇಷ ಕಳಚಿದಾಗಷ್ಟೇ ಪರಸ್ಪರ ಅರಿವಾಗುವ ವಿನೋದ ಪ್ರಸಂಗ ಸೃಷ್ಟಿಸಿದೆ– 'ಗೊರಿಲ್ಲಾ ಮತ್ತು ಮೊಲ' ಕಥೆಯಲ್ಲಿ. ಹಾಗೆಯೇ ನನ್ನ ಹತ್ತನೇ ವಯಸ್ಸಿನಲ್ಲಿ ನಮ್ಮ ಹಳ್ಳಿಯಲ್ಲಿದ್ದಾಗ ವರ್ಷಕ್ಕೊಮ್ಮೆ ವಲಸೆ ಬರುತ್ತಿದ್ದ ಹೆಜ್ಜಾರ್ಲೆಗಳು ಸಮೀಪದ ತೆಂಗಿನ ಮರಗಳ ಮೇಲೆ ಕುಳಿತು ಕೂಗುತ್ತಿದ್ದದ್ದು ಐವತ್ತು ವರ್ಷಗಳ ಅನಂತರ 'ಹೊಂಬಾಳೆ' ಕಥೆಯಲ್ಲಿ ಸಾಂಕೇತಿಕವಾಗಿ ಕಾಣಿಸಿಕೊಂಡದ್ದೂ ಉಂಟು. ವಸ್ತುವಿಗೆ ಅನುಗುಣವಾಗಿ ಭಾಷೆಯೂ ಅಣಿಯಾಗುತ್ತದೆ. 'ಅಗ್ನಿ ಪ್ರವೇಶ' ಎಂಬ ಕಥೆಯಲ್ಲಿ ಪೂರ್ಣ ನಿರೂಪಣೆ ನಮ್ಮೂರ ದಲಿತರ ಗ್ರಾಮ್ಯ ಭಾಷೆಯಲ್ಲಿಯೇ ಇದೆ.

**ಈ ಕಾಲಘಟ್ಟದಲ್ಲಿ ಎಲ್ಲವೂ ವೇಗವಾಗಿ ಸಾಗುತ್ತಿವೆ. ಹೊಸ ಹೊಸ ತಂತ್ರಜ್ಞಾನ, ಹೊಸ ಹೊಸ ಮಾಧ್ಯಮಗಳು ಮತ್ತು ಹೊಸ ಹೊಸ ಸಾಧ್ಯತೆಗಳು ಜನರನ್ನು ಯಾವುದೋ ಪ್ರವಾಹದಲ್ಲಿ ಎಳೆದುಕೊಂಡು ಎತ್ತಲೋ ಸಾಗುತ್ತಿವೆ. ಅವುಗಳನ್ನೆಲ್ಲ ಅಕ್ಷರದಲ್ಲಿ ಹಿಡಿದಿಡುವ ಪ್ರಯತ್ನ ಅಷ್ಟಾಗಿ ಆಗುತ್ತಿಲ್ಲ. ಒಟ್ಟಿನಲ್ಲಿ ಸಾಹಿತ್ಯವೇ ಅವಗಣನೆಗೆ ತುತ್ತಾಗಿದೆ.**

ಹೀಗೆ ನನ್ನ ಅನುಭವಗಳು, ಬೇರೆಯವರ ಅನುಭವಗಳು, ತುಣುಕು ಸುದ್ದಿಗಳು ಎಲ್ಲ ಸೇರಿ ನನ್ನೊಳಗೇ ಒಂದು ರಸಾಯನವಾಗಿ ಹೇಗೋ ಕಥೆಯ ರೂಪ ತಾಳುವುದನ್ನು ಈಗ ದೂರ ನಿಂತು ನೋಡುವಾಗ ಇಷ್ಟೆಲ್ಲಾ ಪಾತ್ರಗಳನ್ನು ನಾನು ಸೃಷ್ಟಿಸಿದೆನೇ ಎಂದು ಆಶ್ಚರ್ಯವಾಗುತ್ತದೆ. ನನ್ನ ಕಥೆಗಳನ್ನು ನಾನೇ ಮತ್ತೆ ಓದಿದಾಗ ನನ್ನ ಊರಿನ ಪ್ರಾದೇಶಿಕತೆ, ಭಾಷೆ, ಪಾತ್ರಗಳು, ಘಟನೆಗಳು, ಕೆರೆ, ಬೆಟ್ಟ, ತೋಟ, ಹೊಲ ಎಲ್ಲ ಸ್ಮೃತಿಪಟಲದಲ್ಲಿ ಮರುಹುಟ್ಟುಪಡೆಯುತ್ತವೆ. ಒಂದು ಊರು ತುಂಬುವಷ್ಟು ಪಾತ್ರಗಳು ನನ್ನ ಲೇಖನಿಯ